ನಿರ್ಧರಿಸಿದ್ದೆವು. ಮೂರನೆಯ ಬೃಹತ್ ಸಂಪುಟವನ್ನು 1997ರಲ್ಲಿ ಪರಿಶೀಲಿಸಿದೆ. 1998ರ ಮೇ ತಿಂಗಳಲ್ಲಿ ನಾನು, ವಿಷ್ಣುಮೂರ್ತಿ ಕೆಲವು ದಿನ ಬೆಂಗಳೂರಲ್ಲಿ ಉಳಿದುಕೊಂಡೆವು. ಸೋನಕ್ಕನಲ್ಲಿ ಸಿಕ್ಕ ಕೆಲವು ಪತ್ರ ಮುಂತಾದುವನ್ನು ಸಂಗ್ರಹಿಸಿದೆವು. 'ಪ್ರಜಾವಾಣಿ' ಕಚೇರಿಗೆ ಹೋಗಿ, ಗೋಪಾಲಗೌಡರ ಬದುಕಿನ ಬಗ್ಗೆ ಬಂದ ಸುದ್ದಿ, ವರದಿ, ಲೇಖನ ಮುಂತಾದವನ್ನು ಪ್ರತಿ ಮಾಡಿಕೊಂಡೆವು. ಹಾಗೆಯೇ ಬೇರೆ ಪತ್ರಿಕಾ ಕಚೇರಿಗಳಿಂದಲೂ ಸಾಮಗ್ರಿ ಝೆರಾಕ್ಸ್ ಮಾಡಿಸಿಕೊಂಡೆವು. ಅಂತೂ 'ಗೋಪಾಲಗೌಡ ಶಾಂತವೇರಿ: ಅಂತರಂಗ–ಬಹಿರಂಗ' ಸಿದ್ಧಪಡಿಸಿದೆವು.

8

ಈ ಹೊಸ ಪುಸ್ತಕವನ್ನು ಧಾರವಾಡದಲ್ಲಿಯೇ ಬಿಡುಗಡೆ ಮಾಡಲು ಮತ್ತು ಅದಕ್ಕಾಗಿ ಲೋಹಿಯಾರನ್ನು, ಗೋಪಾಲಗೌಡರನ್ನು ಹತ್ತಿರದಿಂದ ಕಂಡಿದ್ದ, ಲೋಕಸಭಾಧ್ಯಕ್ಷರಾಗಿದ್ದ ರಬಿ ರಾಯ್ ಅವರನ್ನೇ ಆಮಂತ್ರಿಸಬೇಕೆಂದು ವಿಷ್ಣುಮೂರ್ತಿ ಮತ್ತು ಹೇಮಾ ನಿರ್ಧರಿಸಿದರು. ರಬಿ ರಾಯ್ ಅವರನ್ನು ಒಪ್ಪಿಸಿಕೊಂಡು ಬರುವ ಹೊಣೆಯನ್ನು ನನಗೆ ನೀಡಿದರು. ತಕ್ಷಣ ನಾನು ಎಲ್ಲ ವಿವರಗಳನ್ನು ತಿಳಿಸಿ ರಾಯ್ ಅವರಿಗೆ ಪತ್ರ ಬರೆದೆ (ನಂ. 33, ಕ್ಯಾನಿಂಗ್ ಲೇನ್, ಮಂಡೀಹೌಸ್ ಕ್ರಾಸ್, ದಿಲ್ಲಿ). ಅವರ ಸ್ವೀಕೃತಿ ಪತ್ರ ಬಂದೊಡನೆ ಮುಂದಿನ ವ್ಯವಸ್ಥೆ ಮಾಡಲು ದಿಲ್ಲಿಗೆ ಹೋಗಿ ಅವರನ್ನು ಕಂಡೆ (1999ರ ಆಗಸ್ಟ್ 1). ರಾಯ್ ತುಂಬ ಸರಳ ವ್ಯಕ್ತಿ, ಗೋಪಾಲಗೌಡರನ್ನು ಕಂಡಂಥದೇ ಅನುಭವ. ನಲವತ್ತೈದು ನಿಮಿಷ ಅವರ ಜೊತೆ ಮಾತಾಡಿದ್ದೆ. 'ಗರಮ್ ಚಾಯ್' ಮಾಡಿಸಿಕೊಟ್ಟರು. ತಿಂಡಿ ಬೇಡ ಅಂದೆ. ಅವರಿಗೆ ವಿಮಾನದ ಮೂಲಕ ಮುಂಬಯಿಗೆ, ನಂತರ ಧಾರವಾಡಕ್ಕೆ ಟ್ರೇನಿನಲ್ಲಿ ಬರಲು ಟಿಕೆಟ್ ಮಾಡಿಸಿ ಕೊಡುವೆ ಅಂದೆ. ತಕ್ಷಣ ನಿರಾಕರಿಸಿದರು, ಸರ್ಕಾರ ತಮಗೆ ದೇಶದಲ್ಲಿ ಸುತ್ತಾಡಲು ಉಚಿತ ಟ್ರೇನ್ ಪ್ರಯಾಣ ಸೌಲಭ್ಯ ನೀಡುತ್ತದೆ; ಅದನ್ನು ಬಳಸಿಕೊಂಡು, ಸಹಾಯಕ ಶಂತನು ಜೊತೆ ಬರುತ್ತೇನೆ ಅಂದರು. ಲೋಕ ಸಭಾಧ್ಯಕ್ಷರಾಗಿದ್ದ ರಾಯ್ ಅವರಿಗೆ ಯಾವುದೇ ಜಂಭವಿರಲಿಲ್ಲ. ಅವರ ಮನೆಯಲ್ಲಿ ಸಹ, ಸಹಾಯ ಯಾಚಿಸಿ ಬಂದಿದ್ದ, ಇಂಥ ಬಡ ಜನರೇ ನೆರೆದಿದ್ದರು.

ಕೃತಿ ಬಿಡುಗಡೆ ಬಗ್ಗೆ ಗೌಡರ ಒಡನಾಡಿಗಳಾಗಿದ್ದ ವೈಯೆನ್ಕೆ, ಜಿ.ಎಸ್. ಸದಾಶಿವ, ಕೋಣಂದೂರು ಲಿಂಗಪ್ಪ, ಪುಟ್ಟಸ್ವಾಮಿ ಮುಂತಾದ ಅನೇಕರಿಗೆ ತಿಳಿಸಿದೆವು. ಕವಿವಿ ಅತಿಥಿಗೃಹದಲ್ಲಿ ರಬಿ ರಾಯ್, ದೇಜಗೌ ಅವರಿಗೆ ಕೊಠಡಿಗಳನ್ನು ಕಾದಿರಿಸಿದ್ದೆ. ವಿಷ್ಣುಮೂರ್ತಿ ದಂಪತಿ ನಮ್ಮ ಮನೆಯಲ್ಲಿ ಉಳಿದರು, ಬೇರೆ ಬೇರೆ ಕಡೆಯಿಂದ ಬರಲಿದ್ದ ಅತಿಥಿಗಳಿಗೆ ಹೋಟಲಿನಲ್ಲಿ ಕೊಠಡಿ ಮಾಡಿಸಿದ್ದೆವು. ರಬಿ ರಾಯ್ ಮತ್ತು ಶಂತನು 1999ರ ಆಗಸ್ಟ್ 29ರಂದು ನಸುಕಿನಲ್ಲಿ ಟ್ರೇನಿನಲ್ಲಿ ಧಾರವಾಡಕ್ಕೆ ಬಂದರು. ಅವರನ್ನು ಕವಿವಿ ಗೆಸ್ಟ್ ಹೌಸ್‌ಗೆ ಕರೆದುಕೊಂಡು ಹೋದೆವು. ಅಲ್ಲಿಯ ನಿಸರ್ಗ, ಶಾಂತ ವಾತಾವರಣ ಅವರಿಗೆ ಹಿಡಿಸಿತು. ಅವರ ಜೊತೆ ದೇಜಗೌ ಇದ್ದುದು ಅನುಕೂಲವಾಯಿತು.

ಅಂದು ಸಂಜೆ ಕವಿವ ಸಂಘದಲ್ಲಿ ಕಾರ್ಯಕ್ರಮ ನಿಗದಿಯಾಗಿತ್ತು. ಅದಕ್ಕಿಂತ ಸ್ವಲ್ಪ ಹೊತ್ತು ಮೊದಲು, ಸಂಜೆ 6 ಗಂಟೆಗೆ ಪತ್ರಕರ್ತರೊಂದಿಗೆ ರಾಯ್ ಅವರ ಸಂದರ್ಶನ ಏರ್ಪಡಿಸಿದ್ದೆವು. ಧಾರವಾಡ, ಹುಬ್ಬಳ್ಳಿಯ ಅನೇಕ ಸಾಹಿತಿಗಳು, ಕಲಾವಿದರು, ಸಾಮಾಜಿಕ ಕಾರ್ಯಕರ್ತರು, ನ್ಯಾಯವಾದಿಗಳು, ಅಧ್ಯಾಪಕರು ಭಾಗವಹಿಸಿದ್ದರು. ತೀರ್ಥಹಳ್ಳಿ, ಶಿವಮೊಗ್ಗ ಕಡೆಯಿಂದ ರವಳಪ್ಪ, ಗರ್ತಿಕೆರೆ ರಾಘಣ್ಣ ಮುಂತಾದ ಗೋಪಾಲಗೌಡರ ಅಭಿಮಾನಿಗಳು ಬಂದಿದ್ದರು.

ಕರ್ನಾಟಕದಲ್ಲಿ ಗೌಡರು ಹುಟ್ಟು ಹಾಕಿದ ಸಾಮಾಜಿಕ ಚಿಂತನೆ, ಹೋರಾಟದ ಬಗ್ಗೆ ಡಾ. ವಿಷ್ಣುಮೂರ್ತಿ ಹೇಳಿದರು. ವಿಷ್ಣುಮೂರ್ತಿ ರಚಿಸಿದ, ಸಂಪಾದಿಸಿದ 'ಗೋಪಾಲಗೌಡ ಶಾಂತವೇರಿ: ಅಂತರಂಗಬಹಿರಂಗ' ಪುಸ್ತಕದ ಪರಿಚಯ ಹೇಮಾ ನೀಡಿದಳು. ದೇಜಗೌ ಅಧ್ಯಕ್ಷತೆಯಲ್ಲಿ, ರಾಯ್ ಅವರು ಕೃತಿಯನ್ನು ಬಿಡುಗಡೆ ಮಾಡಿ, ಸರಳ ಹಿಂದಿಯಲ್ಲಿ ಮಾತನಾಡಿದರು. ಲೋಹಿಯಾ, ಜಯಪ್ರಕಾಶ್ ನಾರಾಯಣ್, ಗೋಪಾಲಗೌಡರ ಜೊತೆಗಿನ ತಮ್ಮ ಒಡನಾಟ, ಅವರ ಚಿಂತನೆ, ಈಗ ಹಾದಿ ತಪ್ಪಿದ ರಾಷ್ಟ್ರ–ರಾಜ್ಯ ರಾಜಕಾರಣದ ಭ್ರಷ್ಟ ವ್ಯವಸ್ಥೆಯ ಬಗ್ಗೆ ಒಂದು ಗಂಟೆಗಿಂತ ಹೆಚ್ಚು ಹೊತ್ತು ಮಾತನಾಡಿದರು. ಜೆಪಿ ಮಾದರಿಯ ಚಳವಳಿಯನ್ನು ರಾಷ್ಟ್ರಮಟ್ಟದಲ್ಲಿ